(*b*) if so, when that work will be completed;

(*c*) the expenditure likely to be incurred in connection with the above work;

(*d*) the mileage of the above road which can be got tarred with the amount already provided for ?

A.—Sri H. K. VEERANNA GOWDH (Minister for Public Works).—

(*a*) The portion of the road from Yelandur to Mamballi is proposed to be tarred.

(*b*) During 1959-60.

(*c*) Rs. 1·14 lakhs as estimated.

(*d*) 8 miles 1 furlong.

ಶ್ರೀಮತಿ ಕೆಂಪಮ್ಮ.—ಪ್ರಶ್ನೆಯಲ್ಲಿ ಮರಳಿಯಿಂದ ಮಾಂಬಳ್ಳಿಯವರೆಗೆ ಯಾವಾಗ ಟಾರು ರಸ್ತೆಗಳನ್ನು ಮಾಡುತ್ತೀರಿ ಎಂದು ಕೇಳಿದ್ದಕ್ಕೆ "ಯಳಂದೂರಿನಿಂದ ಮಾಂಬಳ್ಳಿಯವರೆಗೆ" ಎಂದು ಹೇಳಿರುವುದು ತಪ್ಪಲ್ಲವೇ ?

* ಶ್ರೀ ಎಚ್. ಕೆ. ವೀರಣ್ಣಗೌಡ.—'ಯಳಂದೂರು' ಎನ್ನುವುದು ತಪ್ಪಾಗಿ ಆಚ್ಚಾಗಿದೆ.

ಶ್ರೀಮತಿ ಕೆಂಪಮ್ಮ.—ಈ ಕೆಲಸವನ್ನು 1959-60 ರಲ್ಲಿ ಪೂರೈಸಲಾಗುವುದು ಎಂದು ಹೇಳಿದೆ. 1958-59 ರ ಒಳಗಾಗಿ ಏಕೆ ಈ ಕೆಲಸವನ್ನು ಪೂರೈಸಬಾರದು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಕಷ್ಟ ಹೀಗಿದೆ. ಇದು ಕರಿಯಮಣ್ಣಿನ ನೆಲ. ಅದರಿಂದ ಮೊದಲು ಸಣ್ಣ ಸಣ್ಣ ಜಲ್ಲಿಗಳನ್ನು ಹಾಕಿ ಅನಂತರ ದಪ್ಪ ಕಲ್ಲುಗಳನ್ನು, ಬೋಲ್ಡರುಗಳನ್ನು ಹಾಕಬೇಕು, ಮೆಟಲ್ಲು ಹಾಕಬೇಕು. ಈ ರೀತಿಯಾಗಿ ಎಲ್ಲೆಲ್ಲಿ ಬ್ಲಾಕ್ ಕಾಟನ್ ಸಾಯಿಲ್ ಇದೆಯೋ ಅಲ್ಲೆಲ್ಲಾ ಇದೇ ರೀತಿಯ ಕಷ್ಟಗಳಾಗುತ್ತವೆ ಮತ್ತು ಇದರಿಂದ ಕೆಲಸ ಸ್ವಲ್ಪ ನಿಧಾನವಾಗಿ ಆಗುತ್ತದೆ.

Restoration of Tank in Otkur, Raichur Taluk.

Q.—2550. Sri G. BHIMANNA (Raichur).—

Will the Government be pleased to state :—

the steps taken for effecting repairs to the breached tank in Otkur, Raichur taluk ?

A.—Sri H. K. VEERANNA GOWDH (Minister for Public Works).—

An estimate amounting to Rs. 21,000 has been sanctioned and work is being taken up shortly.

ಶ್ರೀ ಜಿ. ಭೀಮಣ್ಣ.—ಈ ಕೆಲಸದಿಂದ ಎಷ್ಟು ಜಮೀನು ಸಾಗುವಳಿಯಾಗುತ್ತದೆ ?

ಶ್ರೀ ಹೆಚ್. ಕೆ. ವೀರಣ್ಣಗೌಡ.—270 ಎಕರೆ 35 ಗುಂಟೆಗಳು.

ಶ್ರೀ ಜಿ. ಭೀಮಣ್ಣ.—21,000 ರೂಪಾಯಿಗಳಿಗೆ ಅಂದಾಜನ್ನು ಮಾಡಲಾಗಿದೆ ಎಂದು ಹೇಳಿರುವುದರಲ್ಲಿ ಎಷ್ಟರಮಟ್ಟಿನ ಕೆಲಸವಾಗಿದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ಟೆಂಡರನ್ನು ಕರೆದಿದೆ. ಆ ಟೆಂಡರುಗಳನ್ನು ನೋಡಿ ಒಪ್ಪಿಕೊಂಡು ಅನಂತರ ಕಂಟ್ರಾಕ್ಟರಿಗೆ ಕೊಟ್ಟು ಕೆಲಸಮಾಡಿಸಬೇಕಾಗಿದೆ.

ಶ್ರೀ ಜಿ. ಭೀಮಣ್ಣ.—ಈ ವರ್ಷವೇ ಈ ಕಾರ್ಯವನ್ನು ಮುಗಿಸುವುದಾಗಿ ಆಶ್ವಾಸನೆಯನ್ನು ಕೊಡಲಾಗುತ್ತದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸ್ವಲ್ಪ ಹೆಚ್ಚು ಕಡಮೆ ಈ ವರ್ಷವೇ ಮುಗಿಸಬೇಕೆಂದಿದೆ.

ಶ್ರೀಮತಿ ಬಸವರಾಜೇಶ್ವರಿ.—ಕೆರೆ ಒಡೆದಿದ್ದರೆ ಬಾಗಾಯ್ತು ಎಂದು ಹಣವನ್ನು ವಸೂಲುಮಾಡುತ್ತಿರುವುದು ಗೊತ್ತಾಗಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—1956-57ರಲ್ಲಿ ಎಂದರೆ ಹೋದವರ್ಷವೇ ಕೆರೆ ಒಡೆದಿದೆ. ಒಂದು ವರ್ಷದ ಕಂದಾಯವನ್ನು ವಸೂಲುಮಾಡಿರಬಹುದು. ಕೆಲವು ಕಡೆಗಳಲ್ಲಿ ಇಪ್ಪತ್ತು ಮೂವತ್ತು ವರ್ಷಗಳಿಂದಲೂ ತರಿ ಕಂದಾಯವನ್ನು ವಸೂಲುಮಾಡಿರುವ ಉದಾಹರಣೆಗಳೂ ಇರಬಹುದು.

Inconvenience caused due to continuance of Urdu in official correspondence in Hyderabad Karnatak.

Q.—2568. Smt. BASAVARAJESHWARI (Manvi).—

Will the Government be pleased to state :—

(*a*) whether they are aware of the great inconvenience caused to Kannada speaking people in the Hyderabad Karnatak area on account of the continued use of Urdu in all official correspondences;

(*b*) whether it is a fact that the work in the Secretariat is handicapped greatly on account of Urdu correspondence coming up from the Hyderabad Karnataka area;

(*c*) whether they propose to issue instructions to all Government officers in Hyderabad Karnatak area to discontinue the use of Urdu in official correspondence and make greater use of Kannada in its place ?

A.—Sri S. NIJALINGAPPA (Chief Minister).—

(*a*) It may be that some section of the public feel some inconvenience on account of the use of Urdu in some of